ಜಿಮೇಲ್; ಸೈಬರ್ ದಾಳಿ ವದಂತಿ ಸುತ್ತ...



■ ಶಶಿಕುಮಾರ್ ಸಿ.

ಎಚ್ಚೆತ್ತುಕೊಳ್ಳುವುದು ಅನಿವಾರ್ಯ

ತಮ್ಮ ಮೇಲೆ ಯಾವುದೇ ರೀತಿಯ ಸೈಬರ್ ದಾಳಿಯಾಗಿಲ್ಲ ಎಂದು ಜಿಮೇಲ್ ಒಡೆತನದ ಗೂಗಲ್ ಹೇಳುತ್ತಿದ್ದರೂ ದೈನಂದಿನ ಕೆಲಸ ಕಾರ್ಯಗಳಲ್ಲಿ ಜಿಮೇಲ್ ಬಳಸುತ್ತಿರುವ ನಾವು ನೀವೆಲ್ಲರೂ ಈ ಬಗ್ಗೆ ಎಚ್ಚರವಹಿಸುವುದು ಅನಿವಾರ್ಯ. ಕಾಲಕಾಲಕ್ಕೆ ಬಳಕೆದಾರರು ತಮ್ಮ ಜಿಮೇಲ್ ಖಾತೆಯ ಪಾಸ್‌ವರ್ಡ್ ಬದಲಿಸುವುದು ಅಭ್ಯಾಸ ಮಾಡಿಕೊಳ್ಳಿ. ಎರಡು ಹಂತದ ಭದ್ರತಾ ವ್ಯವಸ್ಥೆಯನ್ನು ಸೆಟ್ ಮಾಡಿಕೊಳ್ಳಿ. ಪಾಸ್‌ವರ್ಡ್ ಸೆಟ್ ಮಾಡುವಾಗ 1234..., ಡೇಟ್ ಆಫ್ ಬರ್ತ್, ಮೊಬೈಲ್ ನಂಬರ್ ನಂತಹ ಪಾಸ್‌ವರ್ಡ್ ಸೆಟ್ ಮಾಡುವ ಚಟವನ್ನು ಬಿಡಬೇಕು. ಸ್ಟ್ರಾಂಗ್ ಪಾಸ್‌ವರ್ಡ್ ಸೆಟ್ ಮಾಡುವುದು ಎಲ್ಲ ದೃಷ್ಟಿಯಿಂದಲೂ ಒಳ್ಳೆಯದು.

ಆಗಸ್ಟ್ ತಿಂಗಳಲ್ಲಿ ಗೂಗಲ್ ಖಾತೆ ಭದ್ರತೆಯನ್ನು ಬಲಪಡಿಸಿಕೊಳ್ಳುವ ಸಲುವಾಗಿ ಕೆಲ ಬಳಕೆದಾರರಿಗೆ ಈ ಬಗ್ಗೆ ಇಮೇಲ್ ಕಳುಹಿಸಿದೆ. ಎರಡು ಹಂತದ ಪರಿಶೀಲನೆ (2SV) ಅನ್ನು ಆನ್ ಮಾಡುವುದರಿಂದ ಖಾತೆ ಭದ್ರತೆ ಹಲವು ಪಟ್ಟು ಹೆಚ್ಚಾಗುತ್ತದೆ ಎಂದಿರುವ ಗೂಗಲ್, ಪಾಸ್‌ವರ್ಡ್ ನಮೂದಿಸಿದ ನಂತರ, ಬಳಕೆದಾರರ ನೋಂದಾಯಿತ ಸಾಧನಗಳಿಗೆ ಬರುವ ಮತ್ತೊಂದು ಹಂತದ ಕೋಡ್ ನಮೂದಿಸಬೇಕು. ಈ ವ್ಯವಸ್ಥೆಯನ್ನು ಸೆಟ್ ಮಾಡಿಕೊಂಡಲ್ಲಿ, ಮಾಹಿತಿ ಹಾಗೂ ಜಿಮೇಲ್ ಪಾಸ್‌ವರ್ಡ್ ಸೋರಿಕೆಯಾಗಿ ಹ್ಯಾಕರ್‌ಗಳ ಕೈ ಸೇರಿದ್ದರೂ ಖಾತೆಯನ್ನು ಪ್ರವೇಶಿಸಲು ಅವರಿಗೆ ಸಾಧ್ಯವಾಗುವುದಿಲ್ಲ.

ಜಿಮೇಲ್ ಗೂಗಲ್‌ನ ಬಹುಬಳಕೆಯ ವೇದಿಕೆ. ಇಡೀ ವಿಶ್ವದಾದ್ಯಂತ ಅತ್ಯಧಿಕ ಬಳಕೆದಾರರನ್ನು ಹೊಂದಿರುವ ಹೆಗ್ಗಳಿಕೆಯೂ ಇದಕ್ಕಿದೆ. ಟೆಕ್ ದೈತ್ಯ ಎಂದೇ ಗುರುತಿಸಿಕೊಂಡಿರುವ ಗೂಗಲ್ ಬಗ್ಗೆ ನಿತ್ಯವೂ ಹಲವಾರು ಸುದ್ದಿಗಳು ಹೊರಬೀಳುತ್ತಲೇ ಇರುತ್ತವೆ. ಇವುಗಳ ನಡುವೆ ಈಚೆಗೆ 250 ಕೋಟಿಗೂ ಅಧಿಕ ಬಳಕೆದಾರರನ್ನು ಹೊಂದಿರುವ ಜಿಮೇಲ್ ಮೇಲೆ ಸೈಬರ್ ದಾಳಿಯಾಗಿದ್ದು, ಕೂಡಲೇ ಜಿಮೇಲ್ ಖಾತೆಯ ಪಾಸ್‌ವರ್ಡ್ ಬದಲಾಯಿಸುವಂತೆ ವದಂತಿಯು ಹರಡಿದೆ.

ವದಂತಿ ಹರಡಿದ ಬೆನ್ನಲ್ಲೆ ಗೂಗಲ್, ಜಿಮೇಲ್ ಖಾತೆಗಳ ಮೇಲೆ ಸೈಬರ್ ದಾಳಿಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದು, ವದಂತಿಗಳಿಗೆ ಕಿವಿಗೊಡದಂತೆ ಮನವಿ ಮಾಡಿದೆ. ಅಲ್ಲದೇ, ಗೂಗಲ್ ಉತ್ಪನ್ನಗಳ ಬಳಕೆದಾರರಿಗೆ ಹೆಚ್ಚಿನ ಸುರಕ್ಷತೆಯನ್ನು ಕಲ್ಪಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಲೇ ಇರುತ್ತದೆ. ಇದರ ಭಾಗವಾಗಿಯೇ ಜಿಮೇಲ್‌ನಲ್ಲಿ ಈಚೆಗೆ ಕೆಲವೊಂದಿಷ್ಟು ಅಪ್‌ಡೇಟ್‌ಗಳನ್ನಷ್ಟೇ ಮಾಡಲಾಗಿತ್ತು ಎಂದಿದೆ ಕಂಪನಿ.

ವಾಸ್ತವವಾಗಿ ಜಿಮೇಲ್ ಡೇಟಾಬೇಸ್ ಅನ್ನು ನಿರ್ವಹಿಸುವ ಕಂಪನಿಯಾದ ಸೇಲ್ಸ್‌ಫೋರ್ಸ್‌ನ ಕ್ಲೌಡ್ ಪ್ಲಾಟ್‌ಫಾರ್ಮ್‌ನಲ್ಲಿ ಡೇಟಾ ಬ್ರೀಚ್ ಸಂಭವಿಸಿದೆ. ಶೈನಿಹಂಟರ್ಸ್ ಎಂಬ ಹ್ಯಾಕರ್ ಗುಂಪು ಡೇಟಾ ಬ್ರೀಚ್‌ಗೆ ಕಾರಣವಾಗಿದೆ. ಆದರೆ, ಇದರಿಂದ ಬಳಕೆದಾರರ ವೈಯಕ್ತಿಕ ಡೇಟಾ ಕಳುವಾಗಿಲ್ಲ.

ಏನಿದು ವದಂತಿ?

'ಜಿಮೇಲ್ ಮೇಲೆ ಇದೇ ಮೊದಲ ಬಾರಿಗೆ ಅತಿದೊಡ್ಡ ಸೈಬರ್ ದಾಳಿ ನಡೆದಿದೆ. ಇದರಿಂದಾಗಿ ಜಗತ್ತಿನಾದ್ಯಂತ ಜಿಮೇಲ್ ಬಳಸುತ್ತಿರುವ 250 ಕೋಟಿ ಬಳಕೆದಾರರ ವೈಯಕ್ತಿಕ ಮಾಹಿತಿ ಹ್ಯಾಕರ್‌ಗಳ ಕೈ ತಲುಪಿದೆ. ಹ್ಯಾಕರ್‌ಗಳು ಇದನ್ನು ಬಳಸಿಕೊಂಡು ಜನರಿಗೆ ವಂಚನೆ ಮಾಡಬಹುದು. ಇದರ ಬೆನ್ನಲ್ಲೇ ಸೈಬರ್ ಸುರಕ್ಷತೆಯನ್ನು ಹೆಚ್ಚಿಸಲು ಎರಡು ಹಂತದ ಪರಿಶೀಲನೆಯನ್ನು ಸಕ್ರಿಯಗೊಳಿಸಲು ಗೂಗಲ್ ಜಿಮೇಲ್ ಬಳಕೆದಾರರನ್ನು ಒತ್ತಾಯಿಸಿದೆ. ಬಳಕೆದಾರರ ಜಿಮೇಲ್ ಖಾತೆಯ ಪಾಸ್ ವರ್ಡ್ ಬಳಸಿಕೊಂಡು ಹ್ಯಾಕರ್‌ಗಳು ದೊಡ್ಡ ಹಗರಣ ಮಾಡಬಹುದು. ಇದು ಇಲ್ಲಿಯವರೆಗೆ ಗೂಗಲ್ ಡೇಟಾಬೇಸ್‌ನಲ್ಲಿ ನಡೆದ ಅತಿದೊಡ್ಡ ಡೇಟಾ ಸೋರಿಕೆ ಎಂದು ಭದ್ರತಾ ತಜ್ಞರು ನಂಬಿದ್ದಾರೆ.' ಎಂಬುದು ಹಬ್ಬಿದ ವದಂತಿಯಾಗಿತ್ತು. ಆದರೆ, ಕಂಪನಿಯು ಬಳಕೆದಾರರ ವೈಯಕ್ತಿಕ ಮಾಹಿತಿಯನ್ನು ರಕ್ಷಿಸುವ ಸಲುವಾಗಿ ಎರಡು ಹಂತದ ಪರಿಶೀಲನೆಯನ್ನು ಸಕ್ರಿಯಗೊಳಿಸಲು ಹಲವಾರು ಕ್ರಮಗಳನ್ನಷ್ಟೇ ಕೈಗೊಂಡಿತ್ತು. ಹೊರತಾಗಿ ಯಾವುದೇ ದಾಳಿಯು ನಡೆದಿಲ್ಲ.

ವರದಿಗಳ ಪ್ರಕಾರ, ಇಂತಹದ್ದೊಂದು ಸೈಬರ್ ದಾಳಿಯು 2025ರ ಜೂನ್‌ನಲ್ಲೇ ಸೇಲ್ಸ್‌ಫೋರ್ಸ್‌ನ ಕ್ಲೌಡ್‌ನಲ್ಲಿ ನಡೆಸಲಾಗಿತ್ತು. ಹ್ಯಾಕರ್ ಗುಂಪು ಸಾಮಾಜಿಕ ಎಂಜಿನಿಯರಿಂಗ್ ಸಹಾಯದಿಂದ ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ. ಗೂಗಲ್‌ನ ಥ್ರೆಟ್ ಇಂಟೆಲಿಜೆನ್ಸ್ ಗ್ರೂಪ್ (ಜಿಟಿಐಜಿ) ಪ್ರಕಾರ, ಸ್ಕ್ಯಾಮರ್‌ಗಳು ಫೋನ್ ಕರೆಗಳ ಮೂಲಕ ಐಟಿ ಸಿಬ್ಬಂದಿಯನ್ನು ತಮ್ಮ ಮೋಸದ ಜಾಲಕ್ಕೆ ಬೀಳಿಸಿಕೊಂಡಿದ್ದಾರೆ. ಸೈಬರ್ ಖದೀಮರು ಗೂಗಲ್ ಉದ್ಯೋಗಿಗಳಂತೆ ನಟಿಸಿ, ಸೇಲ್ಸ್‌ಫೋರ್ಸ್‌ಗೆ ನಕಲಿ ಅಪ್ಲಿಕೇಷನ್ ಸಂಪರ್ಕಿಸುವ ಮೂಲಕ ಡೇಟಾ ಸೋರಿಕೆ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ.

ಇತ್ತ ಯಾವುದೇ ಬಳಕೆದಾರರ ಪಾಸ್‌ವರ್ಡ್ ಸೋರಿಕೆಯಾಗಿಲ್ಲ ಎಂದು ಗೂಗಲ್ ಸ್ಪಷ್ಟವಾಗಿ ಹೇಳುತ್ತಿದ್ದರೂ, ಹ್ಯಾಕರ್‌ಗಳು ಕದ್ದ ಡೇಟಾವನ್ನು ದುರುಪಯೋಗಪಡಿಸಿಕೊಂಡು ಬಳಕೆದಾರರನ್ನು ಸಂಪರ್ಕಿಸಲು ಯತ್ನಿಸುತ್ತಿದ್ದಾರೆ. ಈ ಬಗ್ಗೆ ಜಿಮೇಲ್ ಬಳಕೆದಾರರು ಹಲವಾರು ಆನ್‌ಲೈನ್ ವೇದಿಕೆಗಳ ಮೂಲಕ ಫಿಶಿಂಗ್ ಇಮೇಲ್ ಬಂದಿವೆ ಎಂದು ಸೋಷಿಯಲ್ ಮೀಡಿಯಾಗಳಲ್ಲಿ ಬರೆದುಕೊಂಡಿದ್ದಾರೆ. ಅವರ ಮೊಬೈಲ್ ಸಂಖ್ಯೆಗಳಿಗೆ ಸ್ಪಾಮ್ ಕರೆಗಳು ಮತ್ತು ವಂಚನೆಯ ಉದ್ದೇಶದಿಂದ ಕೂಡಿದ ಸಂದೇಶಗಳು ಬರುತ್ತಿವೆ ಎಂದಿದ್ದಾರೆ. ■